ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಪದವಿಪೂರ್ವಕಾಲೇಜು

(ಪದವಿಪೂರ್ವ ಶಿಕ್ಷಣ ಇಲಾಖೆಯ ಮಾನ್ಯತೆ ಪಡೆದಿದೆ)

ಬಿ.ಎನ್‌ರಸ್ತೆ ,ಮೈಸೂರು– 570 025.ಕರ್ನಾಟಕ

EST 1964-65

☎–0821 – 2548237 ಕಾಲೇಜು ಸಂಕೇತ ಸಂಖ್ಯೆNN016Website: www.jsspucmain.org E-mail: jsspuc@gmail.com

ದಿನಾಂಕ:13.01.2024

## ಪ್ರಕಟಣೆಯ ಕೃಪೆಗಾಗಿ

"ಪಠ್ಯಗಳಿಂದ ಸಿಗುವ ಜ್ಞಾನ ಮಾತ್ರದಿಂದಲೇ ಉತ್ತಮ ವ್ಯಕ್ತಿತ್ವ ನಿರ್ಮಾಣ ಸಾಧ್ಯವಿಲ್ಲ. ಬದ್ಧತೆ, ಪ್ರೀತಿ, ವಿಶ್ವಾಸ, ಅಂತಃಕರಣ, ಅನುಕಂಪ, ಸಾಮಾಜಕ್ಕೆ ಕೊಡುಗೆ ನೀಡುವಂತಹ ಗುಣಗಳು ಬೆಳೆಯುವುದು ಮನೆಯಲ್ಲಿ. ಉತ್ತಮ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ತಾಯಿ ಬಹಳ ಮುಖ್ಯ ಪಾತ್ರ ವಹಿಸುತ್ತಾಳೆ. ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಪೂರ್ವಿಕರು ಇದನ್ನು ಮನಗಂಡದ್ದರ ಫಲವಾಗಿ ಇಂದಿಗೂ ನಮ್ಮ ದೇಶದಲ್ಲಿ 'ಮಾತೃ ದೇವೋಭವ' ಎಂದು ತಾಯಿಯನ್ನು ಪೂಜಿಸಲಾಗುತ್ತದೆ. ಜಗತ್ತಿನ ಎಲ್ಲ ದೇಶಗಳು ತಮ್ಮ ನಾಡದೇವತೆಯನ್ನು ತಂದೆಯೆಂದು ಆರಾಧಿಸುತ್ತವೆ. ಆದರೆ ತಾಯಿಯೆಂದು ಆರಾಧಿಸುವ ಏಕೈಕ ರಾಷ್ಟ್ರವೆಂದರೆ ಭಾರತ ಮಾತ್ರ" ಎಂದು ಮೈಸೂರಿನ ವಿಜಯವಾಣಿ ದಿನಪತ್ರಿಕೆ ಉಪಸಂಪಾದಕರಾದ ಎ. ಆರ್. ರಘುರಾಮ ಹೇಳಿದರು.

ನಗರದ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಜನವರಿ 13 ರಂದು ಏರ್ಪಡಿಸಲಾಗಿದ್ದ 2023-24ನೇ ಶೈಕ್ಷಣಿಕ ಸಾಲಿನ ಕಲಾ, ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಂದರ್ಭದಲ್ಲಿ ಅವರು ಮಾತನಾಡುತ್ತಿದ್ದರು.

"ಹಿಂದೆ ಬ್ರಿಟೀಷರು ಭಾರತವನ್ನು, ಅದರ ಸಂಪತ್ತನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಇಲ್ಲಿದ್ದ ಗುರುಕುಲ ಶಿಕ್ಷಣ ಪದ್ಧತಿಯನ್ನು ನಾಶ ಮಾಡಿದರು. ಇಂದು ಇದೇ ಕೆಲಸವನ್ನು ವಿದ್ಯಾರ್ಥಿಗಳ ಕೈಸೇರಿರುವ ಮೊಬೈಲ್ ಫೋನಿನ ಆಪ್‌ಗಳು ಮಾಡುತ್ತಿವೆ. ಇದನ್ನು ಅರಿತುಕೊಂಡು ವಿದ್ಯಾರ್ಥಿಗಳು ಜವಾಬ್ದಾರಿಯುತ ಪ್ರಜೆಗಳಾಗುವತ್ತ ಶ್ರಮಿಸಬೇಕು. ಇದಕ್ಕೆ ತಾಯಿಯ ಸಂಸ್ಕಾರ ಮತ್ತು ಗುರುವಿನ ಸಂಸ್ಕಾರ ಎರಡೂ ದೊರಕುವುದು ಬಹಳ ಮುಖ್ಯ" ಎಂದರು.

ಝಾನ್ಸಿ ರಾಣಿ, ಡಾ. ಅಬ್ದುಲ್ ಕಲಾಂ, ಥಾಮಸ್ ಆಳ್ವ ಎಡಿಸನ್ ಮೊದಲಾದವರ ಕುರಿತಾದ ಉದಾಹರಣೆಗಳನ್ನು ನೀಡುತ್ತ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿ ಮತ್ತು ಗುರುವಿನ ಪಾತ್ರದ ಮಹತ್ವವನ್ನು ತಿಳಿಸಿಕೊಟ್ಟರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ನಿರ್ದೇಶಕರಾದ ಡಾ. ಸಿ. ವೆಂಕಟೇಶ್ ಅವರು "ನಾವು ಎಂತಹ ಕಠಿಣ ಸಂದರ್ಭಗಳಲ್ಲೂ ಮನಸ್ಸಿನಲ್ಲಿ ಸೋಲೊಪ್ಪಿಕೊಳ್ಳಬಾರದು. ಮಾನಸಿಕ ಸಧೃಡತೆಯಿಲ್ಲದಿದ್ದರೆ, ದೇಹ ಎಷ್ಟೇ ಬಲಿಷ್ಠವಾಗಿದ್ದರೂ ಗೆಲುವು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಗುರಿ ಮುಖ್ಯ. ಕ್ರೀಡೆಯಲ್ಲಿ ಸಾಧನೆ ಮಾಡಬೇಕಾದರೆ ಸ್ವಂತ ಇಚ್ಛೆಯಿಂದ ಅದನ್ನು ಆಯ್ದುಕೊಂಡಿರಬೇಕು. ಅಡ್ಡದಾರಿಗಳನ್ನು ಬಳಸಿಕೊಂಡು ಕ್ರೀಡೆಯಲ್ಲಿ ಸಾಧನೆ ಮಾಡಲು ಸಾಧ್ಯವಿಲ್ಲ. ಹತ್ತು ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪ್ರಯತ್ನಿಸುವುದಕ್ಕಿಂತ ಒಂದು ಕ್ಷೇತ್ರದಲ್ಲಿ ಸತತ ಪ್ರಯತ್ನ ಮಾಡುವುದು ಉತ್ತಮ. ಭವಿಷ್ಯ ಜೀವನದ ದೃಷ್ಟಿಯಿಂದ ಕ್ರೀಡೆ ಮತ್ತು ಶಿಕ್ಷಣ ಎರಡನ್ನೂ ಸಮಾನವಾಗಿ ಪರಿಗಣಿಸುವುದು ಬಹಳ ಮುಖ್ಯ" ಎಂಬ ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ ವಿದ್ಯಾರ್ಥಿಗಳಿಗೆ ಗಣ್ಯರಿಂದ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಬಿ. ನಿರಂಜನಮೂರ್ತಿ ಅವರು " ನಾವು ಬೆಳೆದು ಬಂದಿರುವ ದಾರಿಯನ್ನು ಮರೆಯಬಾರದು. ನಮ್ಮನ್ನು ಪೋಷಿಸಿ ಬೆಳೆಸಿದ ವ್ಯವಸ್ಥೆಯನ್ನು ಕಡೆಗಣಿಸಿ ಕ್ಷುಲ್ಲಕ ಆಮಿಷಗಳಿಗೆ ಮಣಿದು ಬೇರೆ ವ್ಯವಸ್ಥೆಗಳನ್ನು ಆಶ್ರಯಿಸಬಾರದು. ಬೇರೆ ಯಾವುದೇ ದೇಶದಲ್ಲಿ ಇಲ್ಲದ ಸಂಸ್ಕೃತಿ, ಸಂಸ್ಕಾರ ಭಾರತದ ನೆಲದಲ್ಲಿದೆ. ಇದಕ್ಕೆ ಕಾರಣ ನಮ್ಮ ಋಷಿ-ಮುನಿಗಳು ತೋರಿಸಿಕೊಟ್ಟಿರುವ ಜೀವನ ಪದ್ಧತಿ. ವಿದ್ಯಾರ್ಥಿಗಳು ಸಾತ್ವಿಕ ಗುಣಗಳನ್ನು ಬೆಳೆಸಿಕೊಂಡು ಸತ್ಪ್ರಜೆಗಳಾಗಿ ಬದುಕಬೇಕು. ಸಮಾಜಕ್ಕೆ ಕೊಡುಗೆ ನೀಡಬೇಕು" ಎಂದು ಕರೆ ನೀಡಿದರು.

ಪ್ರಸಕ್ತ ಶೈಕ್ಷಣಿಕ ಸಾಲಿನ ಅಂತ್ಯದಲ್ಲಿ ನಿವೃತ್ತಿ ಹೊಂದಲಿರುವ ವಾಣಿಜ್ಯಶಾಸ್ತ್ರ ವಿಭಾಗದ ಹಿರಿಯ ಉಪನ್ಯಾಸಕರಾದ ಎಸ್. ಎಂ. ದಾಸ್ತಿಕೊಪ್ಪ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ವರದಿಗಳನ್ನು ಕ್ರಮವಾಗಿ ಅರ್ಥಶಾಸ್ತ್ರ ಉಪನ್ಯಾಸಕರಾದ ಜಿ. ರಮೇಶ್ ಮತ್ತು ಪ್ರಥಮ ಪಿಯುಸಿ ವಿಜ್ಞಾನ ವಿದ್ಯಾರ್ಥಿನಿ ಹರ್ಷಿಣಿ ಒಪ್ಪಿಸಿದರು.

ಕನ್ನಡ ಉಪನ್ಯಾಸಕರಾದ ಟಿ. ಗುರುಪಾದಸ್ವಾಮಿ ಸ್ವಾಗತಿಸಿದರು. ಪ್ರಥಮ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ ಪ್ರವೀಣ್ ಆಚಾರ್ ಪ್ರಾರ್ಥಿಸಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಭೂಗೋಳಶಾಸ್ತ್ರ ಉಪನ್ಯಾಸಕ ಎಂ. ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು. ರಸಾಯನಶಾಸ್ತ್ರ ಉಪನ್ಯಾಸಕರಾದ ಹೆಚ್. ಆರ್. ಗಾಯತ್ರಿ ವಂದಿಸಿದರು. ಜೆಎಸ್ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್. ಸೋಮಶೇಖರ, ಕ್ರೀಡಾ ಸಮಿತಿ ಸಂಚಾಲಕರಾದ ದೈಹಿಕ ಶಿಕ್ಷಣ ಉಪನ್ಯಾಸಕ ಟಿ. ಅರವಿಂದ್, ಎಸ್. ಎಂ. ದಾಸ್ತಿಕೊಪ್ಪ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾಚಾರ್ಯರು

ಗೆ,

ಸಂಪಾದಕರು

-----------------

-----------------

-----------------